ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೇ, ವಿಷಯ ಸಮಿತಿಯವರು ಎಲ್ಲವನ್ನೂ ಪರಿಶೀಲನೆ ಮಾಡಿ ಶಿಫಾರಸ್ಸು ಮಾಡಿದ್ದಾರೆ. ಇದು ಮಾರ್ವಾಡಿಗಳಿಗೆ ಸಿಗುವಂತಹ ಕಮೀಷನ್‌ನ್ನು ತೆಗೆದು ಹಾಕುವಂಥದ್ದು, ಅಷ್ಟೇ. ಎ.ಪಿ.ಎಂ.ಸಿ. ಮೂಲಕ ಚೆಕ್ ಕೊಟ್ಟು ರೈತರಿಗೆ ಅನುಕೂಲವನ್ನು ಮಾಡುವಂಥದ್ದು. ಇದರಲ್ಲಿ ಅವರು ನಾವು ನೀವು ಯಾರು ವಿಶೇಷವಾಗಿ ಕನ್ಸಿಡರ್ ಮಾಡುವಂತಹ ಅವಶ್ಯಕತೆ ಇಲ್ಲ. ಪಟ್ಟಭದ್ರ ಹಿತಾಸಕ್ತಿ ಇದ್ದರೆ ಈ ಆ್ಯಕ್ಟ್ ಬೇಡ. ಇದ್ದದ್ದು ನಡೆದುಕೊಂಡು ಹೋಗಲಿ. ತೆಗೆದುಹಾಕುತ್ತೇವೆಂದರೆ ಆ್ಯಕ್ಟ್ ಬರಬಹುದು. ಅಷ್ಟೇ ಇರುವಂಥದ್ದು, ಇದರಲ್ಲಿ ಏನು ಗುಟ್ಟು ಗುಮಾನಿ ಇಲ್ಲ. ಒಂದೇ ಸೆಕ್ಷನ್. ಈಗ ಹಾವೇರಿಯಲ್ಲಿ 15 ಪರ್ಸೆಂಟ್ ಕಮೀಷನ್ ವಸೂಲು ಮಾಡುತ್ತಾರೆ....

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಅವರು ಹೇಳಿದ ಹಾಗೆ ನಾವು ಅದನ್ನು ಮಾಡಬೇಕೆಂದು ಹೇಳುತ್ತೇವೆ. ಅದನ್ನು ಬಿಡುವುದಿಲ್ಲ. ಮಾರ್ವಾಡಿಗಳು ಏನಾದರೂ ತಕರಾರು ಮಾಡಿದರೆ ನಾವು ಅದಕ್ಕೆ ತಯಾರಿಯನ್ನು ಮಾಡಿಕೊಂಡು ಮಾಡಬೇಕಾಗುತ್ತದೆ. ನಾಳೆಯ ದಿವಸ ಟೆಂಡರ್ ಹಾಕುವುದಿಲ್ಲವೆಂದು ಮಾಡಿದರೆ ಅದಕ್ಕೆ ನಾವು ಬೇರೆ ತಯಾರು ಮಾಡಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ನಾವು ಎಲ್ಲಾ ರೆಡಿಯನ್ನು ಮಾಡಿಕೊಳ್ಳುತ್ತೇವೆ. ಇಲ್ಲದಿದ್ದರೆ ಸರ್ಕಾರದಲ್ಲಿ ನಾಳೆ ದೊಂಬರಾಟ ಆದೀತು. ರೈತರ ಮಾಲನ್ನು ಅವರು ಖರೀದಿ ಮಾಡುವುದಕ್ಕೆ ಬರದಿದ್ದಾಗ ನೀವು ಏನು ಮಾಡಿದ್ದೀರಿ ಎಂದಾಗ ನಾವು ತಯಾರಿ ಮಾಡಿಕೊಳ್ಳುತ್ತೇವೆ. ಆ ದೃಷ್ಟಿಯಿಂದ ಮುಂದಕ್ಕೆ ಹಾಕಿದ್ದೇವೆ. ಬೇರೆ ಉದ್ದೇಶದಿಂದ ಅಲ್ಲ. ನಮ್ಮದೂ ಸಹ ಅದೇ ಉದ್ದೇಶವಾಗಿದೆ. ನಿಜವಾಗಿಯೂ ರೈತರ ಹಿತರಕ್ಷಣೆಯನ್ನು ಮಾಡಬೇಕಾದುದು ನಮ್ಮ ಸರ್ಕಾರದ ಜವಾಬ್ದಾರಿಯಾಗಿದೆ.

ಶ್ರೀ ವಾಟಾಳ್ ನಾಗರಾಜ್: ಇಲ್ಲಿಯವರೆಗೆ ತಾವು ಏಕೆ ತಯಾರಾಗಿಲ್ಲ?

(5) ಪ್ರಕಟಣೆ

ಅಧ್ಯಕ್ಷರು: ಪ್ರಕಟಣೆಯು ಇದೆ ಅದನ್ನು ಓದುತ್ತೇನೆ. ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 12ನೇ ಸೆಪ್ಟೆಂಬರ್, 1997 ರಂದು ಈ ಕೆಳಕಂಡ ವಿಧೇಯಕಗಳಿಗೆ ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1. ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು

ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ವಿಧೇಯಕ, 1997

2. ಕರ್ನಾಟಕ ಕೈಗಾರಿಕಾ ಸ್ಥಾಪನೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳು) (ತಿದ್ದುಪಡಿ) ವಿಧೇಯಕ 1997

3. ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 1997

6. ಹೇಳಿಕೆ

(6) ವಿಷಯ (ಅ) ಶ್ರೀ ಬಿ.ಸೋಮಶೇಖರ್‌ರವರು ಉನ್ನತ ಶಿಕ್ಷಣ ಸಚಿವರ ಸ್ಥಾನಕ್ಕೆ ರಾಜಿನಾಮೆ ನೀಡಿದ ಬಗ್ಗೆ

+ ಶ್ರೀ ಬಿ.ಸೋಮಶೇಖರ್ (ಮಳವಳ್ಳಿ): ಮಾನ್ಯ ಸಭಾಧ್ಯಕ್ಷರೇ, ಮೊದಲನೆಯದಾಗಿ ನಾನು ನಿಮಗೆ ಒಂದು ದಿವಸ ಮುಂಚಿತವಾಗಿ ನಿಮಗೆ ನೋಟೀಸ್ ಕೊಟ್ಟು ಹೇಳಿಕೆಯನ್ನು ಮಾಡುವುದಕ್ಕೆ ಅವಕಾಶವನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೂ ಸಹಿತ ತಮ್ಮ ಅಧಿಕಾರವನ್ನು ಚಲಾಯಿಸಿ, ಕೆಲವೇ ಒಂದೆರಡು ಗಂಟೆಗಳಲ್ಲಿ ನನ್ನ ಹೇಳಿಕೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿರುತ್ತೀರಿ. ಅದಕ್ಕೆ ತಮಗೆ ನಾನು ಮೊದಲನೆಯದಾಗಿ ಅಭಾರಿಯಾಗಿದ್ದೇನೆ. ಹಾಗೂ ಕೃತಜ್ಞನಾಗಿದ್ದೇನೆ. ನಮ್ಮ ಸರ್ಕಾರದಲ್ಲಿ ಶ್ರೀಮಾನ್ ಜೆ.ಹೆಚ್.ಪಟೇಲ್ ನಾಯಕತ್ವದಲ್ಲಿ ಉನ್ನತ ಶಿಕ್ಷಣ ಸಚಿವನಾಗಿ ಒಂದು ವರ್ಷ ಮೂರು ತಿಂಗಳು ಆಯಿತು. ಆ ಒಂದು ವರ್ಷದ 3 ತಿಂಗಳಲ್ಲಿ ನನ್ನ ಅಧಿಕಾರ ಅವಧಿಯಲ್ಲಿ ನನ್ನ ಕೈಮೀರಿ, ಶಕ್ತಿಯನ್ನು ಮೀರಿ ಕೆಲಸವನ್ನು ಮಾಡಿಕೊಂಡು ಬಂದಿದ್ದೇನೆ. ಈ ನಡುವೆ ಅನೇಕ ವಿವಾದಗಳು, ಅನೇಕ ಸಮಸ್ಯೆಗಳು ನಮ್ಮ ಸರ್ಕಾರದ ಮುಂದೆ ಬಂದವು. ಒಂದು ಒಳ್ಳೆಯ ಸುಧಾರಣೆಯನ್ನು ಮಾಡತಕ್ಕಂತಹ ಅವಕಾಶ ಸಹಿ ಬಂತು. ಈ ಎಲ್ಲಾ ಸಮಸ್ಯೆಗಳ ನಡುವೆ, ನಾನು ಅಧಿಕಾರವನ್ನು ವಹಿಸಿಕೊಂಡ ತಕ್ಷಣ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಒಂದು ಕಡೆ ದಲಿತರು ಡಾ|| ಬಾಬಾಸಾಹೇಬ್ ಅಂಬೇಡ್ಕರ್‌ರವರ ಹೆಸರನ್ನು ಇಡಬೇಕೆಂದು, ಮತ್ತೊಂದು ಕಡೆ ಬಸವೇಶ್ವರರ ಹೆಸರನ್ನು ಇಡಬೇಕಂದು ಸಮಸ್ಯೆ ಬಂತು. ಆ ದಿವಸ ನಾನು ಎರಡು ಗುಂಪಿನವರಿಗೂ ಸಹ ಒಂದು ಹೇಳಿಕೆಯನ್ನು ಕೊಟ್ಟೆ. ಆಗ ಅದು ತಣ್ಣಗಾಯಿತು. ಇದು ನನಗೆ ಬಹಳ ಹೆಮ್ಮೆ ಅನ್ನಿಸಿತ್ತು. ನಮ್ಮ ಸರ್ಕಾರದ ಮೇಲೆ ಜನರು ವಿಶ್ವಾಸವನ್ನು ಇಟ್ಟು ಸಮಸ್ಯೆಯನ್ನು ಉಲ್ಬಣಗೊಳಿಸಲಿಲ್ಲ. ಆದಾದ ಮೇಲೆ ವರ್ಷ ವರ್ಷ ಮಾಡಿದ ಹಾಗೆ ಶಿಕ್ಷಕರು ಪರೀಕ್ಷೆ ವೇಳೆಯಲ್ಲಿ ಬಹಿಷ್ಕಾರವನ್ನು ಹಾಕಿದರು. ಆ ವೇಳೆಯಲ್ಲಿ ಸರ್ಕಾರ ಒಂದು ನಿಲುವನ್ನು ತೆಗೆದುಕೊಂಡಿತ್ತು. ಇದು ಒಂದು ಅನೈತಿಕವಾದಂತಹ ನಿಲುವು, ವಿದ್ಯಾರ್ಥಿಗಳ ದೃಷ್ಟಿಯಿಂದ ಪರೀಕ್ಷೆಯ ವೇಳೆಯಲ್ಲಿ ನೀವು ಈ ನಿಲುವವನ್ನು ತೆಗೆದುಕೊಳ್ಳಬಾರದು